**ಓ ಎಸ್ ನಂಃ 136/2017**
**ಪಿ ಡಬ್ಲ್ಯು ಃ 1**

**ದಿಃ 20.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಕೆ ಹೆಚ್ ಪಿ ವಕೀಲರಿಂದಃ-**

ವಾದಿಗಳು ತಮ್ಮ ಮದುವೆ ಆದಾಗಿನಿಂದಲೂ ಸಹ ಅವರವರ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 1 ಮತ್ತು 2 ನೇ ವಾದಿಗಳ ಮದುವೆ ಸುಮಾರು 40 ವರ್ಷಗಳ ಹಿಂದೆ ಆಗಿರುತ್ತದೆ ಎಂದರೆ ಸರಿ. ನನ್ನ ಮತ್ತು 3ನೇ ವಾದಿಯ ಮದುವೆ ಸುಮಾರು 35 ವರ್ಷಗಳ ಹಿಂದೆ ನೆರವೇರಿರುತ್ತದೆ ಎಂದರೆ ಸರಿ. ನನ್ನ ತಾತನ ಹೆಸರು ಲಿಂಗಯ್ಯ. ತಮ್ಮ ತಾತನ ಜೀವಿತಾವಧಿಯಲ್ಲಿ ಅವರಿಗೆ ಯಾವುದೇ ಪಿತ್ರಾರ್ಜಿತ ಆಸ್ತಿಗಳಾಗಲಿ ಅಥವಾ ಸ್ವಯಾರ್ಜಿತ ಆಸ್ತಿಗಳಾಗಲಿ ಇರಲಿಲ್ಲ ಎಂದರೆ ಸರಿಯಲ್ಲ. ಲಿಂಗಯ್ಯನವರ ಹೆಸರಿನಲ್ಲಿ ಯಾವುದಾದರೂ ಆಸ್ತಿಗಳು ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಲಿಂಗಯ್ಯನವರ ಹೆಸರಿನಲ್ಲಿ ಯಾವುದೇ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾಖಲಾತಿಗಳು ಇರುವುದಿಲ್ಲ ಆದಕಾರಣ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತು ತಮ್ಮ ತಂದೆಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನನ್ನ ತಂದೆ ಅವರ ಜೀವಿತಾವಧಿಯಲ್ಲಿ ಸಾರಾಯಿ ಅಂಗಡಿ ನಡೆಸುತ್ತಿದ್ದರು. ತಮ್ಮ ತಂದೆಯವರ ತಾಯಿ ಲಕ್ಕಮ್ಮರವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ತಮ್ಮ ತಂದೆಯವರು ಮಾಡುತ್ತಿರುವ ವ್ಯಾಪಾರದಿಂದ ಬಂದಂತಃ ಆದಾಯದಿಂದ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ತಮ್ಮ ತಂದೆಯವರು ದಿಃ 18.08.1930 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ತಮ್ಮ ತಂದೆ ಹಾಗೂ ಅವರ ತಾಯಿಯವರು ಜಂಟಿಯಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ತಮ್ಮ ತಂದೆಯವರು ಹಾಗೂ ಅವರ ಅಜ್ಜಿ ಖರೀದಿ ಮಾಡಿದ 30 ವರ್ಷಗಳ ನಂತರ ವಾದಿಗಳು ಜನಿಸಿರುತ್ತಾರೆ ಎಂದರೆ ಸರಿ. ತಮ್ಮ ತಂದೆಯವರು 2016 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ತಮ್ಮ ತಂದೆಯವರ ಜೀವಿತಾವಧಿಯಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಿಃ 30.10.2015 ರಂದು ಒಂದು ನೋಂದಾಯಿತ ದಾನ ಪತ್ರವನ್ನು 1 ಮತ್ತು 2 ನೇ ಪ್ರತಿವಾದಿಗಳ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಮ್ಮ ತಂದೆಯವರು 2 ನೇ

**ಓ ಎಸ್ ನಂಃ 136/2017**
**ಪಿ ಡಬ್ಲ್ಯೂ ಃ 1**

ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ 2 ಎಕರೆ 4 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ದಿಃ 08.10.2015 ರಂದು ಒಂದು ನೋಂದಾಯಿತ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ 30.10.2015 ರಂದು ತಮ್ಮ ತಂದೆಯವರು 1 ಮತ್ತು 3 ನೇ ಪ್ರತಿವಾದಿಗೆ ದಾವ ಸ್ವತ್ತಿನ ಸರ್ವೆ ನಂ. ನಲ್ಲಿ ತಲಾ 2 ಎಕರೆ 4 ಗುಂಟೆಯಂತೆ ಒಂದು ನೋಂದಾಯಿತ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರಗಳ ಆಧಾರದ ಮೇರೆಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ 1 ಮತ್ತು 2 ನೇ ಪ್ರತಿವಾದಿಗಳ ಹೆಸರಿಗೆ ಖಾತೆ ವರ್ಗಾವಣೆ ಆಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂ.18/1 ಪೋಡಿ ಆಗಿ ಹೊಸ ಸರ್ವೆ ನಂ. 18/3, 18/4 ಮತ್ತು 18/5 ಆಗಿದೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯು ಅವರ ಜೀವಿತಾವಧಿಯಲ್ಲಿ ದಿಃ 22.10.2016 ರಲ್ಲಿ ಸರ್ವೆ ನಂ. 18/4 ರಲ್ಲಿ 2 ಎಕರೆ ಜಮೀನಿಗೆ ಸಂಬಂಧಪಟ್ಟಂತೆ, 2 ನೇ ಪ್ರತಿವಾದಿಯ ಹೆಂಡತಿ ಮತ್ತು ಮಗನ ಹೆಸರಿಗೆ (ಪ್ರತಿವಾದಿ 5 ಮತ್ತು 6) ಒಂದು ನೋಂದಾಯಿತ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳಾದ ತಮಗೆ ಯಾವುದೆ ಭಾಗಾಂಶ ಇಲ್ಲದಿದ್ದರು ಸಹ ಪ್ರತಿವಾದಿಗಳಿಗೆ ಸೇರಿದ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**